1192

RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ೬೯ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಕಯ್ಯರು [ವಿಡಿ ಪ್ರತಿ 3 ಪೈ

21—3—1962

ಪ ವ ಎಲ್ಲ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಹಿಂದೀ ಭಾಷೆ

ನವದೆಹಲಿ 18— ಕೆಲಕಾಲದ ಹಿಂದೆ ಹಿಂದಿಯಲ್ಲಿ ಬಂದ ಪತ್ರಗಳಿಗೆ ಸಾಧ್ಯವಾದಷ್ಟನ್ನಟ್ಟಿಗೆ ಹಿಂದಿಯಲ್ಲಿಯೇ ಉತ್ತರಿಸಿಕೊಡುವ ಬಗೆ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಮಂತ್ರಿಶಾಖೆಗಳನ್ನು ಕೋರಲಾಗಿತ್ತು : 63-64 ರವೇಳೆಗೆ ಹಿಂದಿಯನ್ನು ತಮ್ಮ ಅಡಳಿತ ಭಾಷೆಯನ್ನಾಗಿ ಅಂಗೀಕರಿಸುವ ರಾಜ್ಯಗಳಲ್ಲಿ ಹಿಂದಿಯನ್ನು ಇಂಗ್ಲೀಷು ಭಾಷೆಯೊಡಿಗೆ ಪರ್ಯಾಯಹಾರಕ್ಕಾಗಿ ಬಳಸುವುವು — ರಾಷ್ಟ್ರ ಪತಿಗಳ ಆದೇಶದಲ್ಲಿ ತಿಳಿಸಿರುವಂತೆ ಅಖಿಲ ಭಾರತ ಮತ್ತು ಉನ್ನತ ಕೇಂದ್ರ ಸೇವಾ ವಿಭಾಗಗಳಿಗಾಗಿ ನಡೆಯುವ ಸ್ಪರ್ಧಾ ಪರೀಕ್ಷೆಗಳಲ್ಲಿ 61 ರಿಂದ ಐಚ್ಛಿಕ ಹಿಂದೀ ಪತ್ರಿಕೆಯೊಂದನ್ನು ಸೇರಿಸಿಕೊಳ್ಳಲಾಗಿದೆ — ಕಳೆದ ಆಗಸ್ಟ್ ತಿಂಗಳಲ್ಲಿ ಮುಖ್ಯ ಮಂತ್ರಿಗಳ ಸಮ್ಮೇಳನವು ನಡೆದಾಗ ಹಿಂದೀ ಭಾಷೆಯು ಅಖಿಲ ಭಾರತ ಅಡಳಿತ ಭಾಷೆಯಾಗಿ ಜಾರಿಗೆ ಬಂದನಂತರವೂ ಅಪೆಲ ಭಾರತ ಅಡಳಿತ ಉದ್ದೇಶಗಳಿಗಾಗಿ ಇಂಗ್ಲೀಷು ಭಾಷೆಯನ್ನು ಒಂದು ಜೊತೆ ಭಾಷೆಯನ್ನಾಗಿ ಬಳಸುವುದನ್ನು ಮುಂದುವರಿಸುವ ಬಗ್ಗೆ ಭಾರತ ಪರಿಕಾರವು ಪಂವಾಗಿ ಹೊರಡಿಸಿದ ಘೋಷಣೆಯನ್ನು ಈ ಸಮ್ಮೇಳನ ಸ್ವಾಗತಿಸಿತ್ತು.

ಕನಸು ನನಸಾಯಿತು

ಜೈಪುರ 19— ಶತಮಾನ ಪೂರ್ವದ ಅಂಬರ್ ಅರಮನೆಯ ಅಂಗಳದಲ್ಲಿ ಅಲಂಕೃತ ಆನೆಯ ಅಂಬಾರಿ ಮೇಲೆ ಶ್ರೀಮತಿ ಕನಡಿ ಪವಾರು ಮಾಡಿದರು — ಹೀಗೆ ಮಾಡಬೇಕೆಂದಿದ್ದ ಬಹು ದಿವಸಗಳ ತಮ್ಮ ಕನಸು ನನಸಾಯಿತೆಂದು ತಿಳಿಸಿ ಅತೀವ ಆನಂದ ವ್ಯಕ್ತಪಡಿಸಿದರು.

ಖಿದ್ಮೆಮಾಡುತ್ತಿದ್ದ ಮಂತ್ರಿ

ಪಾಂಡೀಚೆರಿ 19— ಶಾಸನ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದಾಗ ಅಬಕ್ಕಾರಿ ಮತ್ತು ಕಂದಾಯ ಮಂತ್ರಿ ರಾಮ ಚಂದ್ರ ಪಿಳ್ಳೈಯವರು ವಿದ್ಯೆಕೊಡೆ ಹಿಡಿಯುತ್ತಿದ್ದಾಗ ಹಿಡಿಯಲ್ಪಟ್ಟರು !

ಕರ್ನಾಟಕ ರಾಜ್ಯ

ಚಿಕ್ಕೋಡಿ— ಈ ಭಾಗದ ನೂರೈವತ್ತು ಜನರ ಸಹಿಯುಳ್ಳ ಮನವಿಯಲ್ಲಿ ರಾಜ್ಯಕ್ಕೆ ' ಕರ್ನಾಟಕ ರಾಜ್ಯ ' ವೆಂಬ ಹೆಸರಿಡಬೇಕೆಂದು ಬೇಡಿಕೊಂಡ ಮನವಿಯನ್ನು ವಿಧಾನ ಸಭಾ ಸದಸ್ಯ ಶ್ರೀ ಎಂ ವಿ ಶಿಟ್ಟಿಯವರು ಮುಖ್ಯಾಂತರ ಮುಖ್ಯ ಮಂತ್ರಿಗಳಿಗೆ ಕಳಿಸಿಕೊಡಲಾಗಿದೆ.

ದ್ರಾವಿಡನಾಡು

ನವದೆಹಲಿ— ದ್ರಾವಿಡನಾಡಿನ ಕೇಳಿಕೆಗೆ ಒಪ್ಪಲಾಗುವುದಿಲ್ಲವೆಂದೂ, ಈ ಸಂದರ್ಭದಲ್ಲಿ ಡಿ ಎಂ ಕೆ ಗೆ ಇತರ ಕೆಲವು ಪಾರ್ಟಿಗಳು ಪ್ರೋತ್ಸಾಹಿಸುತ್ತಿರುವುದು ದುರದೃಷ್ಟವೆಂದೂ ಪಂ|| ನೆಹರು ಲೋಕ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು.

ಪರ್ಷಿಯನ್ನಿನ ಉಪನಿಷತ್ತುಗಳು

ನವದೆಹಲಿ 19— ಉಪನಿಷತ್ತುಗಳ ಪರ್ಷಿಯಾ ಭಾಷಾನುವಾದ ಪ್ರತಿಯನ್ನು ಇರಾನಿ ವಿದ್ವಾಂಸರಾದ ಶ್ರೀ ಜವಾಲಿ ನಿಯಾನಿ ಮತ್ತು ಡಾ|| ತಾರಾ ಚಂದರ ಪಂ || ನೆಹರೂರವರಿಗೆ ಬಹು ಮಾನಿಸಿದರು

ಆಕ್ಷೇಪಕರ ಪ್ರೋಸ್ಪರುಗಳು

ನವದೆಹಲಿ 19— ಜನಾವಣೆಯಲ್ಲಿ ಆಕ್ಷೇಪಕರ ಪ್ರೋಸ್ಪರುಗಳ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ರಾಜ್ಯಸರಕಾರಗಳಿಗೆ ಸೇರಿದ್ದೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಎರಡು ಶತಮಾನಗಳ ಹಿಂದಿನವು

ನವದೆಹಲಿ— ಜನಸಂಘ ಮತ್ತು ಸ್ವತಂತ್ರ ಪಕ್ಷಗಳು ಈ ಕಾಲಕ್ಕೆ ಎರಡು ಶತಮಾನಗಳ ಹಿಂದಿನವುವೆಂದು ಪಂ || ನೆಹರು ಹೇಳಿದರು

ಅಕ್ಕಿ ಬೆಲೆ ಏರುಲ್ಲ

ನವದೆಹಲಿ— ಬಾರಕಾದ್ಯಂತ ಅಕ್ಕಿ ಪರಿಸ್ಥಿತಿ ಉತ್ತಮವಾಗಿರುವುದರಿಂದ ಅಕ್ಕಿ ಬೆಲೆ ಏರುವುದಿಲ್ಲವೆಂದು ಆಹಾರ ಮಂತ್ರಿಗಳು ಹೇಳಿದರು

ದ್ರಾವಿಡನಾಡು ಸ್ಥಾಪನೆಗೆ ಯಾವ ಗಂಡಾಂತರ ಸಹಿಸಲು ಡಿ. ಎಂ. ಕೆ. ಸಿದ್ಧ !

ಇಂಗ್ಲೀಷು ವಲ್ಲದ
ಶಾಸನಸಭಾ ಸದಸ್ಯ

ಜಾಬಲಪುರ 20— ಮಧ್ಯಪ್ರದೇಶ ಶಾಸನಸಭೆಗೆ ಚುನಾಯಿತರಾಗಿರುವ ಶ್ರೀ ಗುಲಾಬಜಂದ್ ಬಾಮೋಟಿ ಎ ಅವರಿಗೆ ಎಲೆಕ್ಷನ್ನನ್ನು ಕಮಿಷನ್ನಿನಿಂದ ಕಳಹಿಸಲಾದ ಸರ್ಟಿಫಿಕೇಟನ್ನು ತಿರಸ್ಕರಿಸಿದರು ; ಅದು ಇಂಗ್ಲೀಷಿನಲ್ಲಿದ್ದದ್ದೇ ಕಾರಣ ; ಒಂದು ರಾಷ್ಟ್ರದ ಭಾಷೆಯಲ್ಲಿ ಬರದಿದ್ದ ತಾವು ಸ್ವೀಕರಿಸುವುದಿಲ್ಲವೆಂದಿರುವರು ; ಹಾಗೆ ಬಾರದಿದ್ದರೆ ತಾವು ಶಾಸನಸಭೆಯನ್ನು ಬಹಿಷ್ಕರಿಸುವುದಾಗಿಯೂ, ಗಾಂಧಿರವರು ರಾಷ್ಟ್ರಾಗಂಭದ ದಿವಸ ಸಭೆಗೆ ಪತ್ರ ನೇತಿಸುವುದನ್ನ ತಡೆಯಲು ಗೇಟಿನಲ್ಲಿ ಸತ್ಯಾಗ್ರಹ ಮಾಡುವುದಾಗಿಯೂ ಹೇಳಿರುವರು

★

ಜಿನೀವಾ ನಿಶ್ಶಸ್ತ್ರೀಕರಣ ಸಭೆಯಲ್ಲಿ ಮಾತನಾಡುತ್ತಾ, ಭಾರತ ರಕ್ಷಣಾ ಮಂತ್ರಿ ಕೃಷ್ಣ ಮೆನನ್ನರು, ನಿಶ್ಶಸ್ತ್ರೀಕರಣ ಹಾಗೂ ನಿಯಂತ್ರಣ ಪ್ರತ್ಯೇಕವಿಷಯಗಳಾಗದ್ದೆಂದು ಹೇಳಿದರು.

ಬೆಂಗಳೂರು ವಾರ್ತೆಯಂತೆ, ರಾಜ್ಯದ ಮಂತ್ರಿಮಂಡಲದಲ್ಲಿ ಪ್ರತಿ ಗುಂಪಿಗೂ ಪ್ರಾತಿನಿಧ್ಯ ಕೊಡಲು ಕಾಲ ಸಕ್ತವಾಗಿಲ್ಲ ಎಂದು ಶ್ರೀ ನಿಜಲಿಂಗಪ್ಪನವರು ಗುಂಪ್ರತೀವ್ರವಾಸಿಸುವುದಾಗಿ ತಿಳಿಯಬಂದಿದೆ

ನವದೆಹಲಿ 20 — ಶ್ರೀಮತಿ ಕನಡಿಯವರು ಭಾರತದಲ್ಲಿ ನ ಪ್ರವಾಸ ಮುಗಿಸಿ ಪಾಕಿಸ್ಥಾನಕ್ಕೆ ತೆರಳಿದರು.

ಮದರಾಸು 20— ತಮ್ಮ ಪಾರ್ಟಿಯು ನಿಷ್ಪ್ರಯೋಜಕ ಮತ್ತು ತಾತ್ಕಾಲಿಕವಾದಿಂದ ದ್ರಾವಿಡನಾಡನ್ನು ಪಡೆಯುವ ಭರವಸೆಯಿದೆಯೆಂದು ದ್ರವಿಡ ಮುನ್ನೇತ್ರ ಕಜಗಂ ನಾಯಕ ಅಣ್ಣಾದೊರೈ ಹೇಳಿದರು — ಲೋಕಸಭೆಯಲ್ಲಿ ಪಂ || ನೆಹರು ಡಿ ಎಂ ಕೆ ವಿಷಯ ಮಾಡಿದ ಟೀಕೆ ಬಗ್ಗೆ ಹೀಗೆ ಹೇಳಿದರು — ವಿಷಯವನ್ನು ಚರ್ಚಿಸುವ ಬದಲು ಪಂ || ನೆಹರು ನಿಂದಿಸಲು ಹೊರಟಿರುವರೆಂದರು — ದ್ರಾವಿಡನಾಡನ್ನು ಪಡೆಯಲು ಡಿ ಎಂ ಕೆ ಎಂತಹ ತ್ಯಾಗಬಲಿದಾನಕ್ಕಾಗಿ ಹಿಂದಿರುವುದಿಲ್ಲವೆಂದೂ ಎಂತಹ ಕಷ್ಟ ನಷ್ಟ ಎದುರಿಸಲು ಸಿದ್ಧವೆಂದೂ ಹೇಳಿದರು

★

ಬೆಂಗಳೂರು 20— ಮೈಸೂರು ಬಜೆಟ್ಟು ತಾ|| 22 ರಿಂದು ಎರಡು ಶಾಸನ ಸಭೆಗಳಲ್ಲೂ ಮಂಡಿಸಲಾಗುವುದು.

ಬೆಲಗಳೂರು 19— ಶಾಸನ ಸಭಾ ಮಾಜೀ ಸದಸ್ಯರಿಬ್ಬರು ಮೇಲೆ ಲಂಚ ಪಡೆದರೆಂಬ ಮೊಬಡ್ಡವೆ ಯ ತೀರ್ಪು ತಾ|| 26 ಕ್ಕೆ ಇಡಲಾಗಿದೆ.

ನವದೆಹಲಿ— ಈಚೆಗೆ ಡಾಕಾದಲ್ಲಿ ಭಾರತ ಪಾಕಿಸ್ಥಾನಗಳ ಜಲಸಂಪತ್ತಿನ ತಜ್ಞರ ಸಭೆ ನಡೆದಾಗ, ಪಾಕಿಸ್ಥಾನವು ಪಶ್ಚಿಮ ಬಂಗಾಳದಲ್ಲಿ ನ ಗಂಗಾ ನದಿಯಿಂದ ತನಗೆ ಹೆಚ್ಚು ನೀರು ಸಂಬಂಧಾಜಾಗಬೇಕೆಂದು ಕೇ ತು

ಸಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವತ್ ದರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪಶ್ಯಪ್ಪ ಜೋಯಿಸರಿಂದ

22 ಮುಹೂರ್ತ ಪ್ರಾರಂಭ ಹಸ್ತ

ಶ್ರೀ ಶಾರದಾ ಮಾತೆಯವರ ಕೆಲವು ಜೀವನ ಸ್ಮರಣೆಗಳು

(ಮುಂದುವರಿದುದು)

ಹುಸೆಮೂರು ತೊರೆದು ಸನ್ಯಾಸಿಗಳಾದ ಇಬ್ಬರು ತರುಣರು ಸಾರಾ ತೆ ಯ ದರ್ಶನಕ್ಕಾಗಿ ಜಯರಾಮವಾತಿಗೆ ಬಂದರು ; ಅಲ್ಲಿ ಇನ್ನೂ ಅನೇಕ ಭಕ್ತರು ನೆರೆದಿದ್ದರು : ರಾತ್ರಿ ಊಟವಾದಮೇಲೆ ಮಾತೆಯವರು ಆ ಇಬ್ಬರು ಸನ್ಯಾಸಿಗಳನ್ನು ಒಳಗೆ ಒಂಹೇಳಿದರು ; ಅವರು ಬಂದೊಡನೆ, ಎಂಡು ಲೋಟಾ ಹಾಲನ್ನು ಅವರಿಗೆ ಕೊಟ್ಟು ಸ್ವೀಕರಿಸುವಂತೆ ಹೇಳಿದರು , ಆಗ ಅವರು ' ಅಮ್ಮ ನಮ್ಮ ಊಟ ಆಗಿದೆ ನಮಗೆ ಪ್ರತ್ಯೇಕವಾದ ಈ ಉಪಚಾರವೇಕೆ ? ಎಂದು ಹೇಳಿದಾಗ, ಮಾತೆ ಅಂದರು ' ನನೆಯಲ್ಲಿ ಹಾಲು ಸ್ವಲ್ಪ ಕಡಿಮೆ : ಎಲ್ಲರಿಗೂ ಬಡಿಸಲಾಗಲಿಲ್ಲ : ಇತರ ಭಕ್ತರಿಗೆ ಅವರ ಮನೆಯಲ್ಲಿ ಬೇಕಾದಷ್ಟು ಉಪಚಾರ ಮಾಡಿ ತ್ತಾರೆ : ಮನೆ ಮಾಡು ತೊರೆದು ಸನ್ಯಾಸಿಗಳಾದ ನಿಮಗೆ ಯಾರು ಉಪಚಾರ ಮಾಡುತ್ತಾರೆ ? ತೆಗೆದ.ಕೊಳ್ಳಿ ' ಎಂದರು.

೦೦೦೦

ಆಶ್ರಮದಲ್ಲಿ ಒಂದು ಬೆಕ್ಕು ಯಾವಾಗಲೂ ಠಾಕೂರನ ನೈವೇದ್ಯದ ವಸ್ತು ಗಳನ್ನು ಕದ್ದು ತಿನ್ನುತ್ತಿತ್ತು ; ಹೀಗಾಗಿ ಸನ್ಯಾಸಿಯೊಬ್ಬರು ಅದನ್ನು ಸಿಕ್ಕಿದಲ್ಲಿ ಹೊಡೆದು ಓಡಿಸುತ್ತಿದ್ದರು ; ಮಾತೆಯವರು ಅದನ್ನು ಕಂಡಾಗಲೆಲ್ಲಾ ' ಯಾಕೆ ಆ ಬೆಕ್ಕನ್ನು ಹೊಡೆಯುತ್ತೀಯಾ ? ಹೊಟ್ಟೆ ಪಾಡಿಗೆ ಕಂಡಲ್ಲಿ ಅದು ತಿಂಡಿಗೆ ಬಾಯಿ ಹಾಕುತ್ತದೆ ' ಎಂದು ಆಗಾಗ ತಡೆಯುತ್ತಿದ್ದರು ; ಒಮ್ಮೊಮ್ಮೆ ಅವರು ತಾವೇ ಅದಕ್ಕೆ ನೈವೇದ್ಯದ ಕ್ಷೀರವನ್ನು ಕುಡಿಸಿದ್ದುಂಟು. ಆಶ್ರಮವನ್ನು ಬಿಟ್ಟು ಪ್ರಯಾಣಕ್ಕೆ ಹೊರಟು ನಿಂತಾಗ ಮಾತೆಯವರು ಆ ಸನ್ಯಾಸಿಯನ್ನು ಕರೆದು ' ನೋಡಪ್ಪಾ, ಈ ಬೆಕ್ಕನ್ನು ಉಪವಾಸ ಕೆಡವಬೇಡ; ಹೊತ್ತುಹೊತ್ತಿಗೆ ಆಹಾರ ಕೊಡು : ಕೋಲಿನಿಂದ ಹೊಡೆಯ ಬೇಡ : ನೋಡು ! ಆ ಹಕ್ಕಿನಲ್ಲಿ ನಾನಿದ್ದೇನೆಂದು ತಿಳಿ ' ಎಂದರು

೦೦೦೦

ಒಂದು ದಿನ ಸನ್ಯಾಸಿಯೊಬ್ಬನು ಕಾಯಿಗಳನ್ನು ಹೊತ್ತಿರುವ ನೆಲ್ಲಿಯ ಗೆಲ್ಲನ್ನು ಹೊತ್ತು ತಂದನು ; ಆಗ ಮಾತೆಯವರು ನೊಂದುಕೊಂಡು ಹೀಗೆ ಹೇಳಿದರು— ' ನೋಡು, ಕಾಯಿ ಬಿಟ್ಟಿರುವ ಗೆಲ್ಲನ್ನು ಮುರಿಯಬಾರದಪ್ಪ . ಅದರಲ್ಲಿಯೂ ನೆಲ್ಲಿಯ ಗಿಡದ ಗೆಲ್ಲನ್ನು ಮುರಿಯಲೇಬಾರದು : ನೆಲ್ಲಿಯ ಮಂಡಿಯಲ್ಲಿ ಎಲ್ಲಾ ದೇವತೆಗಳ ವಾಸವಿದೆ ; ಅದರ ಕೆಳಗೆ ಜಪ ಧ್ಯಾನಗಳನ್ನು ಮಾಡಿದರೆ, ಬೇಗನೆ ಉತ್ತಮ ಫಲ ಸಿಕ್ಕುವುದು ; ಅದರ ಎಲೆಗಳನ್ನು ಬಿಲ್ವದಳಗಳ ಬದಲಿಗೆ ಶಿವನ ಅರ್ಚನೆಗೆ ಉಪಯೋಗಿಸಬಹುದು '— ಹೀಗೆಂದು ಅದರ ಎಲೆಗಳನ್ನು ಆ ದಿನದ ಪೂಜೆಗೆ ಎತ್ತಿಕೊಡು, ಎಂದು ಶಿಷ್ಯಶಿಗೆ ಹೇಳಿದರು.

SHAKTI

SUDHA

A Superb Tonic

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ವುಡ್‌ಲ್ಯಾಂಡ್ಸ್ ತೇಜಸ್ವಿ 6 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 15—3—62 ರಿಂದ

ಅಡುತ ವೀಟು ಪೆಣ್ (ತಮಿಳು)

ಪಾತ್ರ— ಅಂಜಲೀದೇವಿ, ಟಿ. ಆರ್. ರಾಮಚಂದರ್, ಫ್ರೆಂಡ್ ರಾಮಸ್ವಾಮಿ

ಕರುಣಾನಿಧಿ [ದಿನವಹಿ 3 ಆಟಗಳು]

Space Plant Research

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ

ಏಕೈಕ ಕನ್ನಡ ಪತ್ರಿಕೆ.

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.